## ಕರ್ನಾಟಕ ಸರ್ಕಾರ

ಸಂ:ಗ್ರಾಅಪ/88/ಗ್ರಾನೀಸ(2)12

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:24.07.2013

## ಸುತ್ತೋಲೆ

**ವಿಷಯ:** ಸಾರ್ವಜನಿಕ ಕುಡಿಯುವ ನೀರಿನ ಜಲಮೂಲಗಳನ್ನು ಅಧಿಸೂಚನೆ ಮೂಲಕ ಪ್ರಕಟಿಸುವ ಕುರಿತು.

**ಉಲ್ಲೇಖ:**
1. ಕರ್ನಾಟಕ ಅಂತರ್ಜಲ ಕುಡಿಯುವ ನೀರಿನ ಸರ್ಕಾರದ ಅಧಿಸೂಚನೆ 44 2003 ದಿನಾಂಕ:11.12.2003.
2. ಕರ್ನಾಟಕ ಅಂತರ್ಜಲ ಕುಡಿಯುವ ನೀರಿನ ಸರ್ಕಾರದ ನಿಯಮ ಸಂಖ್ಯೆ:ಗ್ರಾಅಪ/569/ಗ್ರಾನೀಸ(2)2003, ದಿನಾಂಕ:29.04.2004.

-

ಕರ್ನಾಟಕ ಅಂತರ್ಜಲ ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ ವಿಧೇಯಕ 1999/2003ರ ಅಧಿಸೂಚನೆಯನ್ನು ದಿನಾಂಕ:29.04.2003ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

ಅತ್ಯಧಿಕ ಬಳಸಲಾದ ಜಲವಿಭಾಜಕ ಪ್ರದೇಶದ ಪಟ್ಟಿಯನ್ನು ಸರ್ಕಾರದ ಗಣಿ ಮತ್ತು ಭೂವಿಜ್ಞಾನ ಇಲಾಖೆ ಘೋಷಿಸಿರುವ ರೀತ್ಯ ಕರ್ನಾಟಕ ಅಂತರ್ಜಲ ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ ವಿಧೇಯಕ 1999/2003ರ ಪ್ರಕರಣ 2ರ ಕಂಡಿಕೆ (6)ರ ಪ್ರಕಾರ ಅಧಿಸೂಚನೆಯೊಂದಿಗಿನ ಲಗತ್ತನ್ನು ಅನುಬಂಧ –2ರಲ್ಲಿ ಈಗಾಗಲೇ ಪ್ರಕಟಿಸಿದೆ.

ಕರ್ನಾಟಕ ಅಂತರ್ಜಲ ಸಂರಕ್ಷಣೆ ವಿಧೇಯಕ 1999ರ ಪ್ರಕರಣ 8 ಮತ್ತು 9ಕ್ಕೆ ಸಂಬಂಧಿಸಿದಂತೆ ವಶಪಡಿಸಿಕೊಳ್ಳಲಾದ ಖಾಸಗಿ ಬಾವಿಗಳಿಂದ ನೀರನ್ನು ತೆಗೆಯಲು ನಿಷೇಧಿಸಿದೆ. ಮತ್ತು ಸಾರ್ವಜನಿಕ ಹಿತಾಸಕ್ತಿಯಿಂದ ಬಾವಿಯನ್ನು ಮುಚ್ಚುವ ನಿಶ್ಚಿತ ಅವಧಿಯನ್ನು ಸ್ಥಳೀಯ ಅಂತರ್ಜಲ ಮಟ್ಟ ಸುಧಾರಣೆ ಹಾಗೂ ಸಾರ್ವಜನಿಕ ನೀರು ಪೂರೈಕೆ ವ್ಯವಸ್ಥೆ ಮೇಲೆ ಭೂವಿಜ್ಞಾನಿಗಳ ಸಲಹೆ ಆಧರಿಸಿ, ಯುಕ್ತ ಪ್ರಾಧಿಕಾರವು ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಹೊಂದಿರುತ್ತದೆ. ಈ ಹಿನ್ನೆಲೆ ಕರ್ನಾಟಕ ಅಂತರ್ಜಲ ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ಉಲ್ಲೇಖಿತ ಸರ್ಕಾರದ ಅಧಿಸೂಚನೆ ಮತ್ತು ನಿಯಮಗಳನ್ವಯ ಕುಡಿಯುವ ನೀರಿನ ಜಲಮೂಲದ ಸುರಕ್ಷತೆ / ನಿರಂತರತೆ ದೃಷ್ಟಿಯಿಂದ ಕೊಳವೆಬಾವಿ ಕೊರೆದ ನಂತರ, ಸಾರ್ವಜನಿಕ ಕೊಳವೆ ಬಾವಿಗೆ ಪ್ರತಿಕೂಲ ಪರಿಣಾಮವಾಗುವುದು ಒಂದು ವರ್ಷದಲ್ಲಿ ಕಂಡು ಬಂದರೆ, ಅಂತರ್ಜಲ ಸಂರಕ್ಷಣೆ ಕಾಯ್ದೆ ಅನ್ವಯ ಖಾಸಗಿ ಕೊಳವೆ ಬಾವಿಗಳನ್ನು ಸಾರ್ವಜನಿಕ ಕುಡಿಯುವ ನೀರಿನ ಪೂರೈಕೆಗಾಗಿ ಪಡೆದುಕೊಳ್ಳಲು / ವಶಪಡಿಸಿಕೊಳ್ಳಲು ಸ್ಥಳೀಯ ಪ್ರಾಧಿಕಾರಕ್ಕೆ ಅವಕಾಶವಿರುತ್ತದೆ. ಆದ್ದರಿಂದ, ಇಂತಹ ಪ್ರಕರಣಗಳಲ್ಲಿ ಇನ್ನು ಮುಂದೆ ಕಾನೂನು ತೊಡಕು ಉಂಟಾಗದಂತೆ ಮಾಡಲು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸಹಯೋಗದಲ್ಲಿ 30 ದಿವಸಗಳೊಳಗಾಗಿ ಎಲ್ಲಾ ಸಾರ್ವಜನಿಕ ಕುಡಿಯುವ ನೀರಿನ ಕೊಳವೆ ಬಾವಿಗಳನ್ನು ಅಧಿಸೂಚನೆ ಮೂಲಕ ಅಧಿಕೃತವಾಗಿ ಪ್ರಕಟಿಸಲು ಜರೂರು ಕ್ರಮವಹಿಸಬೇಕು. ಅಂತೆಯೇ ಪ್ರಕಟಿಸಿದ ಮಾಹಿತಿಯನ್ನು ಅಂತರ್ಜಾಲದಲ್ಲಿ ಪ್ರತಿ ವರ್ಷ ಇಂಧೀಕರಿಸಲು ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಹಂತದಲ್ಲಿ ಅಗತ್ಯ ಕ್ರಮವಹಿಸಲು ತಿಳಿಸಿದೆ.

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ, ಸಂಕೀರ್ಣ, ನಂ.55, 4ನೇ ಮಹಡಿ, ಅಭಯ ಕಾಂಪ್ಲೆಕ್ಸ್, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20.
3. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಖನಿಜ ಭವನ, ಬೆಂಗಳೂರು.
4. ರಾಜ್ಯದ ಎಲ್ಲಾ (8) ಅಧೀಕ್ಷಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವೃತ್ತ ಕಛೇರಿಗಳು.
5. ರಾಜ್ಯದ ಎಲ್ಲಾ (38) ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳು.
6. ರಾಜ್ಯದ ಎಲ್ಲಾ (176) ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು.

**ಪ್ರತಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ. ವಿಧಾನಸೌಧ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿ, (ಪಂ.ರಾಜ್) ಗ್ರಾಅಪಂ.ರಾಜ್ ಇಲಾಖೆ ಮತ್ತು ಎಲ್ಲಾ ನಿರ್ದೇಶಕರುಗಳು, ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂ.ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು / ಆಪ್ತ ಸಹಾಯಕರುಗಳು.
4. ನಿರ್ದೇಶಕರು, SWSM ಹಾಗೂ ಸರ್ಕಾರದ ಪದನಿಮಿತ್ತ ಅಪರ ಕಾರ್ಯದರ್ಶಿ ಗ್ರಾಅಪಂ. ರಾಜ್ ಇಲಾಖೆ, ಕಾವೇರಿ ಭವನ, ಬೆಂಗಳೂರು-9.
5. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು-01.